ದಿನಾಂಕ 14-06-2022 ಅಸಲು ದಾವಾ ಸಂ.30/2010

ಪಿ.ಡಬ್ಲ್ಯೂ-1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲು : ಪ್ರತಿವಾದಿ ನಂ.2 ಮತ್ತು 7 ರವರ ಪರ ಶ್ರೀ. ಎ ಎಂ ಪಿ ವಕೀಲರಿಂದಃ-**

ಸಾಕ್ಷಿ ಪ್ರಮಾಣ ಪತ್ರಕ್ಕೆ ಮಾಹಿತಿ ನಾನೇ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿ ಇರುತ್ತವೆ. ಸರ್ವೆ ನಂ.49/1 ಸಿ ಇದರ ಚಕ್ಕುಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ಸತ್ಯಪ್ಪ ಚೌಲಗಿ ಇವರ ಜಮೀನು, ಪಶ್ಚಿಮಕ್ಕೆ ಮೋತಿಲಾಲ ಬಂಡಿವಡ್ಡರ ಇವರ ಜಮೀನು, ಉತ್ತರಕ್ಕೆ ಗೋದಾವರಿ ಶುಗರ್ ಕಾರ್ಖಾನೆ, ದಕ್ಷಿಣಕ್ಕೆ ರಾಮಪ್ಪ ದುಂಡಪ್ಪ ಬಂಡಿವಡ್ಡರ ಇವರ ಜಮೀನು ಇದೆ. ನಾನು ಹೊಲ ಖರೀದಿಸುವ ಮೊದಲು ಸದರಿ ಜಮೀನು ಸಣ್ಣಲಕ್ಷ್ಮಣ ದುರ್ಗಪ್ಪ ಬಂಡಿವಡ್ಡರ ಇವರ ಹೆಸರಿನಲ್ಲಿತ್ತು. ಅವರನ್ನು ಹೊರತುಪಡಿಸಿ ಬೇರೆ ಯಾರ ಹೆಸರು ಇರಲಿಲ್ಲ. ಇದರ ಬಗ್ಗೆ ಚೌಕಾಶಿ ಮಾಡಿ ನಾನು ಜಮೀನು ಖರೀದಿಸಿದ್ದೇನೆ. ನಾನು 2007 ರಲ್ಲಿ ಸದರಿ ಜಮೀನನ್ನು ಒಂದು ಲಕ್ಷ 37 ಸಾವಿರ ಹಣ ಕೊಟ್ಟು ಖರೀದಿಸಿದ್ದೇನೆ. ದಿನಾಂಕ ನೆನಪಿಲ್ಲ. ಅದರಂತೆ ಸದರಿ ಖರೀದಿ ಪತ್ರ ಜಮಖಂಡಿಯ ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿಯಾಗಿರುತ್ತದೆ. ಸದರಿ ಜಮೀನಿನ ಕ್ಷೇತ್ರ 1 ಎಕರೆ 15 ಗುಂಟೆ ಇರುತ್ತದೆ. ಅದರಂತೆ ಸಣ್ಣಲಕ್ಷ್ಮಣ ಬಂಡಿವಡ್ಡರ ಇವರು ಹೆಬ್ಬೆಟ್ಟಿನ ಗುರುತು ಮಾಡಿದ್ದು, ಆತನ ಕುಟುಂಬದ ಸದಸ್ಯರು ಮತ್ತು ಸಾಕ್ಷಿದಾರರು ಖರೀದಿ ಪತ್ರಕ್ಕೆ ಸಹಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರದ ಮಾಹಿತಿಗಳನ್ನು ತಿಳಿದುಕೊಂಡು ಅವರೆಲ್ಲರೂ ಸಹಿ ಮಾಡಿದ್ದಾರೆ. ಅದರಂತೆ ಎಲ್ಲರ ಸಮಕ್ಷಮ ನಾನು ಹಣ ಕೊಟ್ಟಿರುತ್ತೇನೆ.

ನಾನು ಜಮೀನು ಖರೀದಿ ತೆಗೆದುಕೊಳ್ಳುವ ಮೊದಲು ಸಣ್ಣಲಕ್ಷ್ಮಣ ಇವರು ಸತ್ಯಬಾಮಾ ಬಂಡಿವಡ್ಡರ ಇವರಿಗೆ 5 ವರ್ಷಕ್ಕೆ ಬೆಳೆ ಊಟ ಮಾಡಲು ಕರಾರು ಬರೆದುಕೊಟ್ಟಿದ್ದರು. ಯಾವ ಇಸ್ವಿಯಲ್ಲಿ ಬರೆದುಕೊಟ್ಟಿದ್ದರು ಎಂದು ನನಗೆ ನೆನಪಿಲ್ಲ. ಅದರಂತೆ 5 ವರ್ಷಗಳ ನಂತರ ಸತ್ಯಬಾಮಾ ಇವರು ಜಮೀನನ್ನು ಬಿಟ್ಟು ಕೊಡಲಿಲ್ಲ. ನಂತರ ಸಣ್ಣಲಕ್ಷ್ಮಣ ಇವರ ಮೇಲೆ ಸತ್ಯಬಾಮಾ ಇವರು ಕಬ್ಜಾ ಸಲುವಾಗಿ ದಾವೆ ದಾಖಲಿಸಿದ್ದಾರೆ. ಸದರಿ ದಾವಾ ನಂಬರ್ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಕಾಯ್ದೆ ಹೊರತುಪಡಿಸಿ ಕಬ್ಜಾ ಬಿಡಿಸಬಾರದೆಂದು ಆದೇಶವಾಗಿರುತ್ತದೆ. ನಂತರ ಸಣ್ಣಲಕ್ಷ್ಮಣ ಈತನು ಸತ್ಯಬಾಮಾ ಇವರ ಮೇಲೆ ದಾವೆ ದಾಖಲಿಸಿದರು. ಸದರಿ ದಾವೆಯನ್ನು ಸಣ್ಣಲಕ್ಷ್ಮಣ ಇವರು ಹಿಂತೆಗೆದುಕೊಂಡರು. ದಾವೆಯನ್ನು ಏಕೆ ಹಿಂತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನಂತರ ನಾನು ನಮ್ಮ ಕಬ್ಜೆಗಾಗಿ ಸತ್ಯಬಾಮಾ ಇವರ ಮೇಲೆ

ದಾವೆ ದಾಖಲಿಸಿದ್ದೇನೆ. ಅವರು ಇಲ್ಲಿಯವರೆಗೂ ನನಗೆ ಜಮೀನಿನ ಕಬ್ಜಾ ಕೊಟ್ಟಿರುವುದಿಲ್ಲ. ಖರೀದಿ ತೆಗೆದುಕೊಂಡಾಗಿನಿಂದ ಜಮೀನಿನ ಉತಾರಗಳಲ್ಲಿ ನನ್ನ ಹೆಸರು ದಾಖಲಿದೆ. ಅದರಂತೆ ಎಂ.ಆರ್ ನಂಬರ್ ಸಹ ನನ್ನ ಹೆಸರಿನಲ್ಲಿದೆ. ಕರಾರು ಪತ್ರ ಆದಾಗಿನಿಂದ ಇಲ್ಲಿಯವರೆಗೂ ಜಮೀನಿನ ಉತ್ಪನ್ನವನ್ನು ಸತ್ಯಬಾಮಾ ಇವರು ತೆಗೆದುಕೊಳ್ಳುತ್ತಿದ್ದಾರೆ. ಖರ್ಚು ತೆಗೆದು ಜಮೀನಿನ ಉತ್ಪನ್ನ ಒಂದು ವರ್ಷಕ್ಕೆ 25 ರಿಂದ 50 ಸಾವಿರ ಆದಾಯ ಬರುತ್ತದೆ. ಜಮೀನಿನ ಉತ್ಪನ್ನವನ್ನು ಕೊಡಿಸಬೇಕಾಗಿ ನನ್ನ ಪ್ರಾರ್ಥನೆ.

**ಪಾಟೀ ಸವಾಲು : ಪ್ರತಿವಾದಿ ನಂ.1 ರವರ ಪರ ಶ್ರೀ. ಎ ವ್ಹಿ ಬಿ ವಕೀಲರಿಂದಃ-**
ವಕೀಲರು ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ .